ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/35/ಎಲ್‌ಆರ್‌ಡಿಸಿ/ಎನ್‌ಬಿಎ/2014-15 /4084

**ನಿರ್ದೇಶಕರವರ ಕಛೇರಿ,**
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ
ಬೆಂಗಳೂರು-560001
ದಿನಾಂಕ: 03.01.2017

ಇವರಿಗೆ,

1. ಪ್ರಾಚಾರ್ಯರು,
   ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್,
   ಬೆಂಗಳೂರು
2. ಪ್ರಾಚಾರ್ಯರು,
   ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್,
   ಮೈಸೂರು

ಮಾನ್ಯರೇ,

ವಿಷಯ : ಸಂಸ್ಥೆಗಳಲ್ಲಿ ಆಯ್ಕೆಯಾದ ಪ್ರೋಗ್ರಾಂಗಳಿಗೆ, ಎನ್.ಬಿ.ಎ ಮಾನ್ಯತೆಯನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಲು ಹಾಗೂ ಪ್ರೋಗ್ರಾಂಗಳ ಫೀಗೆ ಸಂಬಂಧಿಸಿದಂತೆ ಬೇಕಾಗಿರುವ ಹಣದ ಅವಶ್ಯಕತೆಯ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು.

*****

ಮಾನ್ಯ ಉನ್ನತ ಶಿಕ್ಷಣ ಸಚಿವರ ನಿರೀಕ್ಷೆಯಂತೆ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು, ಎಲ್ಲಾ ಕಾರ್ಯಕ್ರಮಗಳಿಗೆ ಮಾನ್ಯತೆ ಪಡೆಯುವುದು ಅವಶ್ಯಕವೆಂದು ಸೂಚಿಸಿರುವ ಹಿನ್ನಲೆಯಲ್ಲಿ ಸಂಸ್ಥೆಗಳಲ್ಲಿ ಮಾನ್ಯತಾ ಮೌಲ್ಯಮಾಪನಕ್ಕಾಗಿ ತಾವು ತಿಳಿಸಿರುವ ಪ್ರೋಗ್ರಾಂಗಳನ್ನು ಆಯ್ಕೆಮಾಡಿರುವುದು ಸರಿಯಷ್ಟೆ.

ತತ್ಸಬಂಧವಾಗಿ ಸಂಸ್ಥೆಗಳ ಪ್ರೋಗ್ರಾಂ ಸಂಯೋಜಕರಿಗೆ ದಿನಾಂಕ: 2.08.2016 ರಿಂದ 4.08.2016 ರವರೆಗೆ ನುರಿತ ತಜ್ಞರಿಂದ ಮಾನ್ಯತೆ ಪಡೆಯುವುದರ ಬಗ್ಗೆ ಸವಿವರವಾದ ತರಬೇತಿಯನ್ನು ಸಹ ನೀಡಲಾಗಿದೆ. ಈ ದಿಸೆಯಲ್ಲಿ ತಾವುಗಳು ಎನ್.ಬಿ.ಎ ವೆಬ್‌ಸೈಟ್ ನಲ್ಲಿ ತಮಗೆ ನೀಡಿರುವ User ID ಮತ್ತು Password ಮುಖೇನ ಲಾಗ್‌ಇನ್ ಆಗಿ ತಮ್ಮ ಸಂಸ್ಥೆಯು ಎನ್.ಬಿ.ಎ ನವದೆಹಲಿ ರವರಲ್ಲಿ ನೊಂದಣಿಯಾಗಿರುವುದರ ಬಗ್ಗೆ ಖಾತ್ರಿ ಪಡಿಸಿಕೊಂಡು ತಮ್ಮ ಸಂಸ್ಥೆಗಳ ಆಯ್ಕೆಯಾದ ಪ್ರೋಗ್ರಾಂಗಳಿಗೆ ಮಾನ್ಯತೆಯನ್ನು ಪಡೆಯಲು ಪ್ರೋಗ್ರಾಂ ಫೀಗೆ ತಗಲುವ ಒಟ್ಟು ಹಣದ ಬಗ್ಗೆ ಕೂಡಲೇ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ತಮ್ಮ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ನಿರ್ದೇಶನಾಲಯವು ಕ್ರೋಢೀಕರಿಸಿ ಸರ್ಕಾರದ ಅನುಮೋದನೆಯನ್ನು ಪಡೆದು ತಮ್ಮ ಸಂಸ್ಥೆಗಳಿಗೆ ಹಣವನ್ನು ಬಿಡುಗಡೆಗೊಳಿಸಲಾಗುತ್ತದೆ. ಆದುದರಿಂದ ಸಂಸ್ಥೆಗಳ ಪ್ರಾಂಶುಪಾಲರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹಾಗೂ ಕೂಡಲೇ ಕಾರ್ಯಪ್ರವೃತ್ತವಾಗಿ ದಿನಾಂಕ:25.01.2017 ರೊಳಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿ

1. ಎಲ್ಲಾ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಮಾಹಿತಿಗಾಗಿ
2. ಇ-ಆಡಳಿತ ಸಂಯೋಜಕರ ಸೂಕ್ತ ಕ್ರಮಕ್ಕಾಗಿ.
3. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.